ಮೇಲೆ ರುಖಿಯಾ ಸಕ್ಕರೆ ಕೊಳ್ಳುವುದಕ್ಕಾಗಿ ಅಂಗಡಿಗೆ ಬಂದಳು. ಅವಳಿನ್ನೂ ಕೆಲಸದಲ್ಲಿರುವಾಗ ತೊಡುತ್ತಿದ್ದ ನೀಲಿ ಬಟ್ಟೆಯಲ್ಲೇ ಇದ್ದಳು. ಅದು ಬೆವರಿನಿಂದಾಗಿ ಕಂಕುಳಿನಲ್ಲಿ ಒದ್ದೆಯಾಗಿತ್ತು. ಅಂಗಡಿಯಲ್ಲಿ ಬೇರೆ ಯಾರೂ ಗಿರಾಕಿಯಿರಲಿಲ್ಲ; ಅವಳೂ ಅಂಥ ಅವಸರದಲ್ಲಿದ್ದಂತೆ ಕಾಣಲಿಲ್ಲ. ಎಷ್ಟೆಲ್ಲ ಕಷ್ಟಪಟ್ಟು ದುಡೀತೀಯ ಎನ್ನುತ್ತಾ ಅವಳು ಅವನನ್ನು ಚುಡಾಯಿಸತೊಡಗಿದಳು.

"ಅಂಗಡೀಲಿ ದುಡಿದೂ ದುಡಿದೂ ಸಾಹುಕಾರನೇ ಆಗಿರಬೇಕು ನೀನು. ಅಂಗಳದಲ್ಲೇನಾದರೂ ದುಡ್ಡು ಮುಚ್ಚಿಟ್ಟಿರುವ ಗುಂಡಿಯುಂಟಾ? ಅಂಗಡಿ ಇಟ್ಟುಕೊಂಡಿರುವ ಜನ ಗುಟ್ಟಾಗಿ ದುಡ್ಡು ಮುಚ್ಚಿಟ್ಟಿರತಾರೆ ಅಂತ ಎಲ್ಲರಿಗೂ ಗೊತ್ತು... ನೀನೇನು ನಿಮ್ಮೂರಿಗೇ ವಾಪಸು ಹೋಗೋಕೆ ಕೂಡಿಡುತಾ ಇದೀಯಾ?"

"ನನ್ನದೇನೂ ಇಲ್ಲ. ಇಲ್ಲಿರುವ ಯಾವುದೂ ನನಗೆ ಸೇರಿದ್ದಲ್ಲ" ಎಂದ ಅವನು ಅವಳ ಮಾತನ್ನು ಅಲ್ಲಗಳೆಯುವಂತೆ.

ಅವಳು ಆ ಮಾತನ್ನು ನಂಬದವಳಂತೆ ಒಳಗೇ ನಗುತ್ತ, "ಆದರೂ ತುಂಬಾ ಕೆಲಸ ಮಾಡ್ತಾನೇ ಇರ್ತೀಯಲ್ಲಾ. ಸ್ವಲ್ಪ ಮಜಾ ತೊಗೋಬೇಕು ಅಂತ ಅನಿಸೋಲ್ವಾ?" ಎಂದು ನಕ್ಕಳು. ಅವನು ಇನ್ನೊಂದೆರಡು ಸೌಟು ಹೆಚ್ಚೇ ಸಕ್ಕರೆ ಹಾಕಿಕೊಟ್ಟ.

"ಥ್ಯಾಂಕ್ಸ್" ಎಂದ ಅವಳು ಅವನಿಂದ ಸಕ್ಕರೆ ಪೊಟ್ಟಣ ತೆಗೆದುಕೊಳ್ಳುವುದಕ್ಕಾಗಿ ಮುಂದೆ ಬಾಗಿದಳು; ಒಂದೆರಡು ಕ್ಷಣ ಹಾಗೆಯೇ ಬಾಗಿಕೊಂಡು ನಿಂತಿದ್ದವಳು ನಿಧಾನವಾಗಿ ಹಿಂದೆ ಸರಿದಳು. "ನಾನು ಅಂಗಡಿಗೆ ಬಂದಾಗಲೆಲ್ಲಾ ಏನಾದರೂ ಕೊಡ್ತಾನೇ ಇರ್ತೀಯ. ನಂಗೊತ್ತು, ನಿಂಗೇನೋ ಬೇಕು ಅಂತ. ಹಾಗೇನಾದರೂ ಬೇಕಾಗಿದ್ರೆ ಹೀಗೆ ಸಣ್ಣದು ಪುಟ್ಟದು ಕೋಡೋಕಿಂತಾ ದೊಡ್ಡದನ್ನೇ ಕೊಡಬೇಕು ಗೊತ್ತಾ?" ಎಂದು ಕೇಳಿದಳು.

ಹಮೀದ್ ಅದಕ್ಕೆ ಬದಲು ಕೊಡಲಿಲ್ಲ. ಸಂಕೋಚದಿಂದ ಅವನ ಮುಖ ಕಪ್ಪಿಟ್ಟಿತು. ಸಣ್ಣಗೆ ನಗುತ್ತಾ ಮುಂದೆ ನಡೆದ ಹುಡುಗಿ ಕತ್ತಲಿನಲ್ಲಿ ಮುಳುಗಿಹೋಗುವ ಮುನ್ನ ಮತ್ತೊಮ್ಮೆ ತನ್ನ ಸುತ್ತ ಕಣ್ಣಾಡಿಸಿದಳು.

## ಎಸ್. ದಿವಾಕರ್

ಬೆಂಗಳೂರು ಜಿಲ್ಲೆಯ ಸೋಮತ್ತನಹಳ್ಳಿಯಲ್ಲಿ ಹುಟ್ಟಿದ ದಿವಾಕರ್ ಕನ್ನಡದ ವಿಶಿಷ್ಟ ಲೇಖಕ. ಪ್ರಕಟಿತ ಕೃತಿಗಳು: 'ಇತಿಹಾಸ', 'ಎಲ್ಲ ಬಲ್ಲವರಿಲ್ಲ ಈ ಊರಿನಲ್ಲಿ', 'ಆಯ್ದ ಕತೆಗಳು' (ಕಥಾಸಂಕಲನಗಳು), 'ಆತ್ಮಚರಿತ್ರೆಯ ಕೊನೆಯ ಪುಟ', 'ಸೋತ ಕಣ್ಣುಗಳನ್ನು ಮಿಟುಕಿಸುವ ಮಧ್ಯಾಹ್ನ', 'ವಿಧಾನಸಭೆಯಲ್ಲೊಂದು ಹಕ್ಕಿ' (ಕವನ ಸಂಕಲನಗಳು), 'ನಾಪತ್ತೆಯಾದ ಗ್ರಾಮಾಫೋನು', 'ಕೃಷ್ಣಲೀಲೆಯಿಂದ ರಾಮರಾಜ್ಯಕ್ಕೆ', 'ಸರ್ವ ಜನಾಂಗದ ಶಾಂತಿಯ ಭಾಷೆ' (ಪ್ರಬಂಧಗಳು), 'ಪ್ರಪಂಚ ಪುಸ್ತಕ' (ವಿಮರ್ಶಾ ಲೇಖನಗಳು), 'ಪಂಡಿತ ಭೀಮಸೇನ ಜೋಶಿ' (ವ್ಯಕ್ತಿಚಿತ್ರ), 'ಕಥಾಜಗತ್ತು', 'ಜಗತ್ತಿನ ಅತಿ ಸಣ್ಣಕತೆಗಳು', 'ಉತ್ತರ ದಕ್ಷಿಣ ದಿಕ್ಕುಗಳನ್ನು ಬಲ್ಲವನು', 'ಹಾರಿಕೊಂಡು ಹೋದವನು' (ಅನುವಾದಿತ ಕಥೆಗಳು), 'ವೆನಿಸ್ಸಿನಲ್ಲಿ ಸಾವು', 'ಹಳ್ಳಿ', 'ಪೋಸ್ಟ್‌ಮ್ಯಾನ್' (ಅನುವಾದಿತ ಕಾದಂಬರಿಗಳು). ದಿವಾಕರ್ ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.